
# ಸೋಂಕಿನ ಸರಪಳಿಯ ಮೂಲಭೂತ ಅಂಶಗಳು

ಲೇಖಕರು: ವಿಜೇತಾ ರಘುರಾಮ್

ಮಾನವರ ಪ್ರತಿಯೊಂದು ಸೋಂಕಿನ ರೋಗವೂ ಕೂಡ 'ಸೋಂಕಿನ ಸರಪಳಿ'ಯ ಮೂಲಕ ಪಸರಿಸುತ್ತದೆ. ಈ ಸರಪಳಿಯಲ್ಲಿ 5 ಘಟಕಗಳಿವೆ. ಯಾವಾಗ ಅನುಕ್ರಮವಾಗಿ ಜರುಗುವ ಘಟನಾವಳಿ ಸರಣಿಗಳು ಈ ಘಟಕಗಳನ್ನು ಒಂದರೊಡನೊಂದು ಜೋಡಿಸುತ್ತವೆಯೋ ಆಗ ನಮಗೆ ಸೋಂಕುಂಟಾಗುತ್ತದೆ. ಸರಪಳಿಯ ಯಾವುದಾದರೂ ಕೊಂಡಿಯನ್ನು ತುಂಡರಿಸುವುದರ ಮುಖಾಂತರ ಸೋಂಕನ್ನು ನಾವು ತಡೆಗಟ್ಟಬಹುದು.


### ಸೋಂಕಿನ ಮೂಲ → ಹೊರ ಹೋಗುವ ಮಾರ್ಗಗಳು → ಪ್ರಸರಣದ ವಿಧಾನ → ಒಳ ಸೇರುವ ಮಾರ್ಗಗಳು → ಹೊಸ ಆತಿಥೇಯ

**ಸೋಂಕಿನ ಮೂಲ**




ಸೋಂಕಿನ ಮೂಲ: ರೋಗಾಣುವು ಬದುಕುವ ಮತ್ತು ಸಂತಾನೋತ್ಪತ್ತಿ ಮಾಡುವ ಸ್ಥಳ. ಉದಾ: ಮಾನವರು, ಪ್ರಾಣಿಗಳು ಅಥವಾ ಪರಿಸರ.

**ಹೊರ ಹೋಗುವ ಮಾರ್ಗಗಳು**




ಹೊರ ಹೋಗುವ ಮಾರ್ಗಗಳು: ರೋಗಾಣುವನ್ನು ಹೊರಹಾಕುವ ದ್ವಾರಗಳು. ಉದಾ: ಗಾಯ, ಬಾಯಿ, ಮೂಗು, ಗುದದ್ವಾರ ಇತ್ಯಾದಿ.

**ಪ್ರಸರಣದ ವಿಧಾನ**




ಪ್ರಸರಣದ ವಿಧಾನ: ರೋಗಾಣುವನ್ನು ಸೋಂಕಿನ ಮೂಲಗಳಿಂದ ಹೊಸ ಆತಿಥೇಯರೊಳಗೆ ನೇರವಾಗಿ ಅಥವಾ ಪರೋಕ್ಷವಾಗಿ ಸೇರಿಸುವ ವಾಹಕಗಳು ಅಥವಾ ಚಟುವಟಿಕೆಗಳು.

**ಒಳ ಸೇರುವ ಮಾರ್ಗಗಳು**



ಒಳ ಸೇರುವ ಮಾರ್ಗಗಳು: ಹೊಸ ಆತಿಥೇಯರ ಒಳಗೆ ರೋಗಾಣುಗಳನ್ನು ಸೇರಿಸುವ ದ್ವಾರಗಳು. ಉದಾ: ಗಾಯ, ಬಾಯಿ, ಮೂಗು ಇತ್ಯಾದಿ.

**ಹೊಸ ಆತಿಥೇಯ**




ಹೊಸ ಆತಿಥೇಯ: ಒಳ ಸೇರಿದೊಡನೆ ಪುನರುತ್ಪಾದನೆಯಲ್ಲಿ ತೊಡಗುವ ರೋಗಾಣು ಬಂದು ಸೇರುವ ಜಾಗ (ಹೊಸ ಮನುಷ್ಯ).

## ನೇರ ಪ್ರಸರಣ


ಸೋಂಕಿನ ಮೂಲಗಳಿಂದ ಹೊಸ ಆತಿಥೇಯರಿಗೆ ಲೋಳ್ಪೊರೆಗಳ ಅಥವಾ ಚರ್ಮದ ನೇರ ಸಂಪರ್ಕ, ಪ್ರಾಣಿಗಳ ಕಡಿತ, ಹನಿಗಳ ಹರಡುವಿಕೆ ಅಥವಾ ಜರಾಯುವಿನ ಮೂಲಕ (ಗರ್ಭಿಣಿಯಿಂದ ಆಕೆಯ ಭ್ರೂಣಕ್ಕೆ) ನೇರವಾಗಿ ಪ್ರಸರಣಗೊಳ್ಳುತ್ತದೆ.

### i) ಲೋಳ್ಪೊರೆಗಳ ಅಥವಾ ಚರ್ಮದ ನೇರ ಸಂಪರ್ಕ




**ಚರ್ಮದಿಂದ ಚರ್ಮಕ್ಕೆ**

ಉದಾ: ಬ್ಯಾಸಿಲ್ಲಸ್ ಅಂಥ್ರಾಸಿಸ್ (Bacillus anthracis –ಅಂಥ್ರಾಕ್ಸ್; ದನಗಳ ಚರ್ಮದಿಂದ), ಹೇನುಗಳು.



**ಮುತ್ತು ಕೊಡುವುದು**

ಎಪ್‌ಸ್ಟೀನ್–ಬಾರ್ ವೈರಸ್ (ಸೋಂಕುಕಾರಕ ಮೋನೋನ್ಯೂಕ್ಲಿಯೋಸಿಸ್ ಅಥವಾ "ಮುತ್ತು ಕೊಡುವ" ಕಾಯಿಲೆ).



**ಲೈಂಗಿಕ ಕ್ರಿಯೆ**

ಹ್ಯೂಮನ್ ಪ್ಯಾಪಿಲ್ಲೋಮಾ ವೈರಸ್ (HPV; ಜನನೇಂದ್ರಿಯಗಳಲ್ಲಿ ವೃಣಗಳುಂಟಾಗುತ್ತವೆ.), HIV (ಏಯ್ಡ್ಸ್).



**ಪರಿಸರದಿಂದ ಚರ್ಮಕ್ಕೆ**


ಕಲುಷಿತಗೊಂಡ ಮಣ್ಣು ಅಥವಾ ಸಸ್ಯಗಳ ನೇರ ಸಂಪರ್ಕ, ಉದಾ: ಕ್ಲಾಸ್ಟ್ರೀಡಿಯಮ್ ಟಟಾನಿ (Clostridium tetani–ಧನುರ್ವಾಯು).

### ii) ಪ್ರಾಣಿಗಳ ಕಡಿತ



ರೇಬಿಸ್ ವೈರಸ್ (ನಾಯಿಗಳಿಂದ ರೇಬೀಸ್)

### iii) ಹನಿಗಳಿಂದ ಪ್ರಸರಣ




ಯಾರಾದರೂ ಕೆಮ್ಮಿದಾಗ, ಸೀನಿದಾಗ ಅಥವಾ ಜೋರಾಗಿ ಮಾತನಾಡಿದಾಗ ಹೊಮ್ಮುವ ದೊಡ್ಡ ಹನಿಗಳು. ಉದಾ: ಇನ್ಫ್ಲುಯೆಂಝಾ ವೈರಸ್ (ವೈರಸ್ ಶೀತಜ್ವರ), ವೇರಿಸೆಲ್ಲಾ ಝೂಸ್ಟರ್ ವೈರಸ್ (ಚಿಕನ್ ಪಾಕ್ಸ್)

### iv) ಮಾಸು (ಹೆರಿಗೆಯ ನಂತರ ಹೊರಬರುವ ಗರ್ಭಚೀಲದ ಭಾಗ):




ಹೆಪಟೈಟಿಸ್ ಸಿ ವೈರಸ್ (ಹೆಪಟೈಟಿಸ್ ಸಿ)

## ಪರೋಕ್ಷ ಪ್ರಸರಣ


ರೋಗಾಣುಗಳ ಪ್ರಸರಣವು ರೋಗವಾಹಕಗಳ ಮೂಲಕ ಪರೋಕ್ಷವಾಗಿ ಆಗುತ್ತದೆ.

### i) ವಾಯುಜನ್ಯ




ಏರೋಸಾಲ್‌ಗಳಿಂದ ಪ್ರಸರಣ, ಉದಾ: ರುಬೆಲ್ಲಾ ವೈರಸ್ (ದಡಾರ), ಅಥವಾ ಧೂಳಿನ ಮುಖಾಂತರ, ಉದಾ: ಹಂಟಾ ವೈರಸ್ (ಹಂಟಾವೈರಸ್ ಪಲ್ಮನರಿ ಸಿಂಡ್ರೋಮ್)

### ii) ವಾಹಕಗಳು




ಕೀಟಗಳಿಂದ ಪ್ರಸಾರ. ಉದಾ: ಪ್ಲಾಸ್ಮೋಡಿಯಮ್ ಹೊತ್ತಿರುವ ಸೊಳ್ಳೆಗಳು (ಮಲೇರಿಯಾ) ಅಥವಾ, ತಮ್ಮ ಉಪಾಂಗಗಳಲ್ಲಿ ಶಿಗೆಲ್ಲಾ (Shigella) ವನ್ನು ಹೊತ್ತಿರುವ ನೊಣಗಳು (ಶಿಗೆಲ್ಲೋಸಿಸ್)

### iii) ವಾಹನಗಳು




**ಆಹಾರ, ನೀರು:**

ಕಲುಷಿತಗೊಂಡ ಆಹಾರ/ನೀರ ಸೇವನೆ, ಅಥವಾ ಶೌಚಾಲಯ ಬಳಕೆಯ ನಂತರ ಕೈ ತೊಳೆಯದೇ ಆಹಾರ ಸೇವನೆಯಿಂದ ಪ್ರಸರಣ. ಉದಾ: ವಿಬ್ರಿಯೋ ಕಾಲರ– Vibrio cholera (ಕಾಲರಾ) ಮತ್ತು ಹೆಪಟೈಟಿಸ್ ಎ ವೈರಸ್ (ಹೆಪಟೈಟಿಸ್ ಎ)



**ರಕ್ತ:**

ರಕ್ತ ಮರುಪೂರಣ ಅಥವಾ ಚುಚ್ಚುಮದ್ದುಗಳನ್ನು ಹಂಚಿಕೊಳ್ಳುವ ಮೂಲಕ ಪ್ರಸರಣ. ಉದಾ: HIV (ಏಯ್ಡ್ಸ್), ಹೆಪಟೈಟಿಸ್ ಬಿ ವೈರಸ್ (ಹೆಪಟೈಟಿಸ್ ಬಿ) ಮತ್ತು ಹೆಪಟೈಟಿಸ್ ಸಿ ವೈರಸ್ (ಹೆಪಟೈಟಿಸ್ ಸಿ)



**ವಸ್ತುಗಳು:**

ಕರವಸ್ತ್ರ, ರಿಮೋಟ್ ಕಂಟ್ರೋಲ್, ಬಾಗಿಲ ಹಿಡಿಕೆ ಇತ್ಯಾದಿಗಳಿಂದ ಪ್ರಸರಣ. ಉದಾ: ಹೆಪಟೈಟಿಸ್ ಎ ವೈರಸ್ (ಹೆಪಟೈಟಿಸ್ ಎ)

**ವಿಜೇತಾ ರಘುರಾಮ** ಇಂಡಿಯಾ ಬಯೋಸೈನ್ಸ್‌ನಲ್ಲಿ ವಿಜ್ಞಾನ ಶಿಕ್ಷಣ ಯೋಜನೆಯ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಹೈದರಾಬಾದ್‌ನ ಸೆಂಟರ್ ಫಾರ್ ಸೆಲ್ಯುಲರ್ ಮತ್ತು ಮಾಲೆಕ್ಯುಲರ್ ಬಯಾಲಜಿ (ಸಿಸಿಎಮ್‌ಬಿ) ಯಲ್ಲಿ ಜೈವಿಕ ಭೌತವಿಜ್ಞಾನದಲ್ಲಿ ಪಿಎಚ್‌ಡಿಯನ್ನು ಪಡೆದಿದ್ದಾರೆ. ಅವರನ್ನು ಈ ಮಿಂಚಂಚೆಯಲ್ಲಿ ಸಂಪರ್ಕಿಸಬಹುದು: vijeta@indiabioscience.org

ಅನುವಾದ: **ಮನೋಜ ಗೋಡಬೋಲೆ** । ಪರಿಶೀಲನೆ: **ದಿನೇಶ್ ಮಡಗಾಂವ್‌ಕರ್**

ಐ ವಂಡರ್... ಶಾಲಾ ವಿಜ್ಞಾನದ ಮರುಶೋಧನೆ

Azim Premji University